**ಎಸ್. ಗಂಗಾಧರಯ್ಯ**

ಕಲೆ: ವಿ.ಎಂ. ಮಂಜುನಾಥ್

# ಕರೆ

## 1

ಕಂಬ್ದಳ್ಳಿ ಕ್ಯಾತ್ಮರ್ನಳ್ಳಿಗಳೆಂಬ ಕೂಡಳ್ಳಿಗಳ ಕೂಡು ಬಸ್‌ಸ್ಟಾಪಿನಲ್ಲಿರುವ ಬಡುಕ್ಲು ಭೈರಜ್ಜನ ಏಕೈಕ ಗುಡ್ಲು ಹೋಟ್ಲಿನಲ್ಲಿ ವತಾರೆಗೇ ಕಂಬ್ದಳ್ಳಿಯ ಮುದ್ದಾಚಾರಿಯೂ, ಕ್ಯಾತ್ಮರ್ನಳ್ಳಿಯ ಹೊಟ್ಗಪ್ಪನೂ, ಮಾಗಿಕಾಲದ ಚಳಿಗೆ ಗೂಬ್ಲಾಕಿಕೊಂಡು ಕೂತು ಕೈಗಳಲ್ಲಿದ್ದ ಲೋಟಗಳಿಂದ ಈಟೀಟೇ ಕಾಫಿನೀರನ್ನು ಸೊರಗುಟ್ಟಿಸಿಕೊಂಡು ಚಪ್ಪರಿಸುತ್ತಿದ್ದರು. ತೆಳ್ಳಗೆ ಬಳ್ಳಗೆ ಕವುಕಂಡಿದ್ದ ಕವಳದಿಂದಾಗಿ ವತಾರೆಯಿಂದ ಮಂಕಾಗಿ ಮಾರುದ್ದ ಬಂದಿದ್ದ ಸೂರ್ಯ ಚುರುಕುಗೊಂಡು ತಡಿಕೆಗಳ ತೂತುಗಳೊಳಗಿಂದ ಇಣುಕಾಕಿ, ಚಿಟಗುಟ್ಟಿಕೊಂಡು ಉರಿಯುತ್ತಿದ್ದ ಒಲೆಯ ಕಾವಿನೊಡಗೂಡಿ ಇಡೀ ಹೋಟ್ಲನ್ನೂ, ಆ ಇದ್ದಿಬ್ಬ ಗಿರಾಕಿಗಳನ್ನೂ ಬೆಚ್ಚಗಿಡುತ್ತಿದ್ದ. ಹಿಂಬದಿಯ ಹೊಲದಿಂದ ಅವರೆ ಸೊಗಡಿನ ಘಮಲು ಅಡ್ಡಾಡುತ್ತಿತ್ತು. ಇನ್ನೊಂದು ಗುಕ್ಕಿಗೆ ಕಲಾಸಾಗುತ್ತೆ ಅನ್ನುವಾಗ ಲೋಟವನ್ನು ಬೆಂಚಿನ ಮೇಲಿಟ್ಟ ಮುದ್ದಾಚಾರಿ, 'ನಮ್ಮ

